ನಿಮಗೆ ಕೊಲೆ ಆಯುಧದ ಬಗ್ಗೆ ಯಾವಾಗ ಹೇಳಬೇಕು ಅನ್ನಿಸ್ತೊ ಅವಾಗ ಹೇಳಿ. ಅಲ್ಲೀತನಕ ಈ ಥರ್ಡ್ ಡಿಗ್ರಿ ಟ್ರೀಟ್ಮೆಂಟ್ ಅನುಭವಿಸಬೇಕು. ವಿನಯ್, ಆ ರಂಗಯ್ಯ ಈ ಜಯಂತ್ ಕೇಸ್ ಡೀಲ್ ಮಾಡಲಿ. ಹಾಗೇ ತಾರಸಿಗೊಂದು ಕಾಫಿ ತಗೊಂಡು ಬನ್ನಿ'.

'ಯೆಸ್ ಸಾರ್'.

ವಿನಯ್ ಕಾಫಿ ಹಿಡಿದು ಬಂದಿದ್ದ.

'ವಿನಯ್ ಗೊತ್ತಲ್ಲ, ಇವತ್ತು ರಂಗಯ್ಯ ಲೀವಲ್ಲಿದ್ದಾರೆ. ರಂಗಯ್ಯನ್ನ ಒಂದು ಗುಮ್ಮ ಮಾಡಿ, ಇವಾಗ್ ಬರ್ತಾರೆ ಅವಾಗ್ ಬರ್ತಾರೆ ಅಂತ, ಜಯಂತ್ ಮೇಲೆ ಮ್ಯಾಕ್ಸಿಮಮ್ ಒತ್ತಡ ಹಾಕಿ. ಹಿ ಶುಡ್ ಬ್ರೇಕ್ ಡೌನ್ ಮೆಂಟಲಿ. ಆದರೆ ಏನು ವರ್ಕ್ ಮಾಡ್ತೋದು ಬೇಡ'.

'ಯೆಸ್ ಸಾರ್'.

'ಈಗ ಇಲ್ಲಿ ಒಂದು ಕುರ್ಚಿ ಕಳಿಸಿ, ಆಮೇಲೆ ಭುಜಂಗ ಮತ್ತೆ ರವೀನ ಕಳಿಸಿ'.

'ಯೆಸ್ ಸಾರ್'.

ರವಿ ಕುರ್ಚಿ ಹೊತ್ತು ಮೇಲೆ ಬಂದ, ಜೊತೆಗೆ ಭುಜಂಗ ಕೂಡ.

ಕುರ್ಚಿಯ ಮೇಲೆ ಕುಳಿತ ಮಾಯಣ್ಣ—

'ಭುಜಂಗ ರೆಕಾರ್ಡರ್ ಆನ್ ಮಾಡಿ, ಮೊದಲು ತರಕಾರಿ ವ್ಯವಹಾರ ಮಾತಾಡೋಣ, ಆಮೇಲೆ ಅಮ್ಮು ವಿಚಾರ ಮಾತಾಡೋಣ. ಶುರು ಮಾಡು ರವಿ'.

'ಸಾರ್, ಈ ತರಕಾರಿ ಎಲ್ಲ ವಿನೋದ್ ಅವರ ತೋಟದ್ದು. ಮೊದಲು ಬೆಂಗಳೂರಲ್ಲಿ ಮೋಜು ಮಾಡೋದಕ್ಕೆ ಎಷ್ಟು ಬೇಕೋ ಅಷ್ಟು ತಂದು ಹಾಕುತ್ತಿದ್ದೆವು. ಆಮೇಲೆ ಈ ಐಡಿಯಾ, ಕಾಂಟಾಕ್ಟ್ ಎಲ್ಲ ಕೊಟ್ಟಿದ್ದು ಗಣಪತಿಯವ್ರೆ, ಹಾಗೆ ನೆಟ್‌ವರ್ಕ್ ಡೆವಲಪ್ ಆಯ್ತು. ನಾವು ತಪ್ಪು ಮಾಡಿದ್ದೀವಿ, ಸಿಕ್ಕಿಹಾಕಿಕೊಂಡಿದ್ದೀವಿ, ಫುಲ್ ಡೀಟೇಲ್ಸ್ ಕಲೆಕ್ಟ್ ಮಾಡಿದ್ದೀರಿ. ಸಾಕ್ಷಿ—ಮಾಲು ಎಲ್ಲಾ ಹಿಡಿದಿದ್ದೀರಿ. ಅದು ಅಷ್ಟೇ ಸಾರ್, ಇನ್ನು ಏನಿದ್ದರೂ ಕೋರ್ಟ್ ಶಿಕ್ಷೆ ಕೊಡಬೇಕಷ್ಟೇ'.

'ಆಯ್ತು, ಅಮ್ಮು ಕೊಲೆಯಾದ ದಿನ, ಅಂದ್ರೆ ಸೋಮವಾರ ಬೆಳಿಗ್ಗೆ ಎಷ್ಟು ಗಂಟೆಗೆ ಅಮ್ಮು ಮನೆ ಹತ್ರ ಬಂದ್ರಿ?'

'ಒಂಬತ್ತು ಮುಕ್ಕಾಲು ಇದ್ದಿರಬಹುದು ಸಾರ್'.

'ಆಮೇಲೆ ಏನಾಯ್ತು?'

'ವಿನೋದ ಆಗಲೇ ತೂಕಡಿಸುತ್ತಿದ್ದ, ಅಮ್ಮು ಮನೆಗೆ ಯಾರೋ ಬಂದಂತಿತ್ತು. ಹೊರಗೆ ಒಂದು ದೊಡ್ಡ ಕಾರು ನಿಂತಿತ್ತು. ಅದು ಹೋಗುವುದನ್ನೇ ಕಾದು ನಂತರ ನಾನೊಬ್ಬನೇ ಹೋದೆ, ಅಮ್ಮು ಮನೆ ಗೇಟ್ ಎಂಟರ್ ಆಗೋದಕ್ಕೆ ಮುಂಚೇನೆ ಕಂಡಿತ್ತು, ರಸ್ತೆ ಕಾರ್ನರ್‌ನಲ್ಲಿ ಚಂದ್ರನ್ ಆಟೊ ಇಳೀತಾಯಿದ್ರು, ನಾನು ಇದು ಯಾಕೋ ಸರಿ ಇಲ್ಲ ಅಂತ ತಕ್ಷಣ ವಾಪಸ್ ಹೋಗಿ ಮತ್ತೆ ಜೀಪ್ ಸೇರಿಕೊಂಡೆ, ವಿನೋದ್ ಗೊರಕೆ ಹೊಡೆಯುತ್ತಿದ್ದ, ಪಾಪ ರಾತ್ರಿಯೆಲ್ಲಾ ಡ್ರೈವ್ ಮಾಡಿದ್ದ. ಏಳಿಸುವುದು ಬೇಡ ಅಂತ ನಾನೂ ಹಾಗೆ ಸೀಟಿನಲ್ಲಿ ರೇಡಿಯೊ ಕೇಳುತ್ತಾ ಕೂತೆ'.

'ಅಮ್ಮು ಮನೆಗೆ ಚಂದ್ರನ್ ಹೋದ್ರಾ?'

'ಆ ತುದಿಯಿಂದ ಅವರು ಬರುತ್ತಿದ್ದರು, ನಮ್ಮ ಗಾಡಿ ಇದ್ದಿದ್ದು ಈ ತುದೀನಲ್ಲಿ. ಅಲ್ಲದೆ ನಮ್ಮ ಜೀಪ್ ಆಪೋಸಿಟ್ ಡೈರೆಕ್ಷನ್ನಿಗೆ ತಿರುಗಿಕೊಂಡಿದ್ದು, ಅವರು ಕಾಣಿಸಲೂ ಇಲ್ಲ, ನಾನು ನೋಡಲೂ ಇಲ್ಲ ಸಾರ್'.

'ಆಮೇಲೆ ನೀನು ಹೋಗ್ಲೇ ಇಲ್ವಾ ಅಮ್ಮು ಮನೆಗೆ?'

'ಹೋಗಬೇಕು ಅಂತ ಇದ್ದೆವು ಸಾರ್, ಆದರೆ ಅಷ್ಟರಲ್ಲಿ ಅಮ್ಮು ಮನೆ ಕೆಲಸದವಳು, ಒಂದೇ ಬೊಬ್ಬೆ ಹಾಕುತ್ತಾ ಮೆಟ್ಟಿಲು ಇಳಿಯುತ್ತಿದ್ದಳು, ಏನೋ ಗಡ್ ಬಡ್ ಆಗಿದೆ ಅಂತ ಗೊತ್ತಾಯಿತು, ನಾವು ಹೊರಟು ಹೋದೆವು ಸಾರ್'.

'ಅಮ್ಮು ಮನೆಗೆ ಏನು ಕಾರಣಕ್ಕೆ ಬಂದಿದ್ರಿ?'

'ಒಂದು ಎಮರ್ಜೆನ್ಸಿ ಇತ್ತು, ಸ್ವಲ್ಪ ಅಮೌಂಟ್ ಬೇಕಿತ್ತು, ಅದಕ್ಕೆ ಹೋಗಿದ್ದೆವು ಸಾರ್'.

'ಎಷ್ಟು ಗಂಟೆಗೆ ವಾಪಸ್ ಹೋದ್ರಿ?'

'ಸುಮಾರು 11:15 ಇರಬಹುದು ಸಾರ್'.

'ಆಮೇಲೆ ಎಲ್ಲಿಗೆ ಹೋದ್ರಿ?'

'ಕೆ.ಆರ್. ಪುರಂ ಮಾರ್ಕೆಟ್ಟಿಗೆ ಸಾರ್'.

'ಅಲ್ಲಿ ಯಾರನ್ನು ನೋಡಲು ಹೋಗಿದ್ರಿ?'

'ಅದೇ ಸಾರ್, ಎಳೆದು ತಂದು ಕೆಳಗೆ ಕೂಡಿದ್ದೀರಲ್ಲ ಆ ರಿಟೇಲ್ ಚನ್ನಯ್ಯನನ್ನು'.

'ಎಷ್ಟು ಗಂಟೆಗೆ ಅಲ್ಲಿದ್ರಿ?'

'ಹನ್ನೊಂದು ಮುಕ್ಕಾಲು ಇರಬಹುದು ಸಾರ್'.

'ಆಮೇಲೆ ಎಲ್ಲಿಗೋದ್ರಿ?'

'ಅಲ್ಲೇ ಎದುರುಗಡೆ ನಂದಿನಿ ಹೋಟೆಲ್‌ನಲ್ಲಿ ಊಟ ಮಾಡಿಕೊಂಡು ಒಂದು ಗಂಟೆಗೆ ವಾಪಸ್ ಮಡಿಕೇರಿ ಕಡೆ ಹೊರಟದ್ದು'.

'ಅಮ್ಮು ಕೊಲೆಯಾದ ವಿಷಯ ನಿನಗೆ ಯಾರು ಹೇಳಿದ್ದು... ಎಷ್ಟು ಗಂಟೆಗೆ?'

'ನನ್ನ ಫೋನ್ ಸೀಜ್ ಮಾಡಿದ್ದೀರಿ. ಅದರಲ್ಲೇ ಇದೆ ನೋಡಿ ಸಾರ್, ನಮ್ಮ ಅಕ್ಕ ಫೋನ್ ಮಾಡಿ ಹೇಳಿದ್ದು ಒಂದೂವರೆ ಗಂಟೆಗೆ ಸಾರ್'.

'ನೀವು ಯಾಕೆ ಜೀಪ್ ಹಿಂದಕ್ಕೆ ತಿರುಗಿಸಿಕೊಂಡು ಅಮ್ಮು ಮನೆಗೆ ಬರಲಿಲ್ಲ?'

'ನಿಮಗೇ ಗೊತ್ತು ಸಾರ್. ನಾನು ಬೇರೆ, ಅದೇ ಸಮಯದಲ್ಲಿ ಅವರ ಮನೆಯ ಹತ್ತಿರ ಇದ್ದೆ. ಈ ಗಾಂಜಾ ಸೊಪ್ಪಿನ ದಂಧೆ ಬಯಲಾಗುವುದೇನೊ ಅನ್ನುವ ಭಯ. ನೀವು ನಮ್ಮನ್ನು ಸುಮ್ಮನೆ ಬಿಡುವುದಿಲ್ಲ ಎಂದು ಫೋನ್ ಆಫ್ ಮಾಡಿ ಹೊರಟು ಬಿಟ್ಟೆವು. ನಂತರ ಸಾಯಂಕಾಲ, ರಾತ್ರಿ ಎಲ್ಲಾ ಮೈಸೂರಲ್ಲಿ ಇದ್ದು, ಬೆಳಗ್ಗೆ ಹತ್ತು ಗಂಟೆಗೆ ಮಡಿಕೇರಿ ತಲುಪಿದ್ದೆವು ಸಾರ್. ನಮಗೆ ಬೇರೇನು ಗೊತ್ತಿಲ್ಲ ಸರ್'.

'ಅಮ್ಮು ನಿಮ್ಮನ್ನ ಮದುವೆ ಆಗಬೇಕು ಅಂತ ಇದ್ದರಾ?'

'ನಾವು ಆಗಲೇ ದೇವಸ್ಥಾನದಲ್ಲಿ ಮದುವೆ ಮಾಡಿಕೊಂಡಿದ್ದೀವಿ ಸಾರ್'.

'ಯಾರೆಲ್ಲಾ ಬಂದಿದ್ದರು ಮದುವೆಗೆ?'

ಕುಟುಂಬದವರು ಯಾರೂ ಒಪ್ಪುವುದಿಲ್ಲ ಅಂತ ಯಾರನ್ನು ಕರೆಯಲಿಲ್ಲ, ಮಿಕ್ಕಿದಂತೆ ಫ್ರೆಂಡ್ಸ್, ನೇಬರ್ಸ್ ಎಲ್ಲಾ ಬಂದಿದ್ದರು'.

'ಈಗ ಅಮ್ಮು ಎಸ್ಟೇಟ್ ಯಾರಿಗೋಗುತ್ತೆ?'

'ಅಮ್ಮು ವಿಲ್ಲೇನಾದ್ರು ಮಾಡಿದ್ದಾರ ಮತ್ತು ಯಾವ ರೀತಿ ವಿಲ್ ಮಾಡಿದ್ದಾರೆ ಗೊತ್ತಿಲ್ಲ'.

'ಆಗಲೇ ಹೇಳ್ದೆ, ಅಮ್ಮು ಮನೆ ಕೆಲಸದವಳು ಬೊಬ್ಬೆ ಹಾಕ್ಕೊಂಡು ಕೆಳಗೆ ಮೆಟ್ಟಿಲು ಇಳಿಯುತ್ತಾ ಓಡಿ ಬಂದಳು ಅಂತಾ...'

'ಹೌದು'.

'ನೀನು ಅಮ್ಮು ಗಂಡ ಅಲ್ವಾ, ತಕ್ಷಣ ಅಲ್ಲಿ ಹೋಗಿ ನೋಡಬೇಕಿತ್ತಲ್ವ? ಅಮ್ಮು ಏನೋ ಅಪಾಯದಲ್ಲಿರಬಹುದು ಅಂತ, ಆದರೆ ನೀನು ತಕ್ಷಣ ಅಲ್ಲಿಂದ ಜಾಗ ಖಾಲಿ ಮಾಡ್ದೆ... ಅದು ಹೇಗೆ?'

'ಅಮ್ಮು, ಕೆಲಸದವಳಿಗೆ ಹೊಡೆದಿರಬಹುದು ಅಂದುಕೊಂಡೆ... ಅವಳೇ ಅಪಾಯದಲ್ಲಿರಬಹುದು ಎಂದು ತಲೆಗೆ ಬರಲಿಲ್ಲ'.

'ಭುಜಂಗ ಇವನ್ನ ಕೆಳಗೆ ಕರ್ಕೊಂಡೋಗಿ ವರ್ಕ್ ಮಾಡಿ... ಪೂರ್ತಿ ಸತ್ಯ ಹೇಳೋತನಕ'.

'ಸಾರ್, ನಾನು ಒಂದು ಮಾತೂ ಸುಳ್ಳು ಹೇಳಿಲ್ಲ ಸಾರ್... ಇವರು ರಾಕ್ಷಸರು ನನ್ನ ಕೊಂದೇಬಿಡ್ತಾರೆ'.

'ಯಾರಿಗೂ ಏನು ನಷ್ಟ ಇಲ್ಲ ಬಿಡು... ಎಳ್ಕೊಂಡೋಗ್ರಿ ಇವನ್ನ...'

'ಯೆಸ್ ಸಾರ್'.

ಭುಜಂಗ ರವಿಯ ಕತ್ತಿನ ಪಟ್ಟಿ ಹಿಡಿದುಕೊಂಡು ಕೆಳಗೆ ಎಳೆದುಕೊಂಡೋದ.

11

ರವಿಯನ್ನು ಭುಜಂಗನ ಜೊತೆಗೆ ಕೆಳಗೆ ಕಳಿಸಿ ಮಾಯಣ್ಣ ಸ್ಟೇಷನ್ನಿನ ತಾರಸಿ ಮೇಲೆ ಅಡ್ಡಾಡುತ್ತಿದ್ದ, ಸೌಜನ್ಯಳ ಫೋನ್ ಬರಬೇಕಿತ್ತು, ಇನ್ನೂ ಬಂದಿರಲಿಲ್ಲ, ಅಷ್ಟರಲ್ಲಿ ಇನ್ನೊಂದು ನಂಬರ್ ಕರೆಯುತ್ತಿತ್ತು.

'ಜೆ ಜೆ ನಗರ್... ಎಸ್ಐ... ಮಾಯಣ್ಣ'.

'ನಾನು ಜಾಹ್ನವಿ... ನೀವು ತಕ್ಷಣ ಬರಬೇಕು... ಮುಖ್ಯವಾದ ವಿಷಯ ಒಂದಿದೆ.'

'ಏನದು ಮೇಡಮ್?'

'ಒಂದಲ್ಲ, ಎರಡು ವಿಷಯ ಇದೆ'.

'ಜಾಹ್ನವಿ ಮೇಡಮ್, ನಾನು ತುಂಬಾ ಗಡಿಬಿಡಿನಲ್ಲಿದ್ದೀನಿ, ಇನ್ನು ಮುಕ್ಕಾಲು ಗಂಟೆಯಲ್ಲಿ ಎಸ್‌ಪಿ ಸಾಹೇಬರು ಬಂದು ಕಾಣುವುದಕ್ಕೆ ಹೇಳಿದ್ದಾರೆ. ನೀವು ಫೋನಲ್ಲೇ ಹೇಳಬಹುದಾ?'

'ಒಂದು, ನಿಮ್ಮ ಸನ್ ಗ್ಲಾಸ್ ನಮ್ಮನೇಲೆ ಬಿಟ್ಟೋಗಿದ್ದೀರ. ಎರಡು, ನಿಮ್ಮ ತನಿಖೆಗೆ ಸಂಬಂಧಿಸಿದ ವಿಷಯ. ಅದಕ್ಕೆ ನೀವು ಇಲ್ಲಿಗೇ ಬರಬೇಕಾಗುತ್ತೆ. ನಾನು ಕಾಯ್ತಿರ್ತೀನಿ ಬನ್ನಿ'.

ಆ ಕಡೆ ಫೋನ್ ಕಟ್ ಆಗಿತ್ತು. ಜಾಹ್ನವಿಯ ಸ್ವರದಲ್ಲಿ ಸುರೆಯ ಸುಳಿವಿತ್ತು. ಇಕ್ಕಟ್ಟಿಗೆ ಸಿಕ್ಕಿದ್ದ ಮಾಯಣ್ಣ. ಆದರೆ ನಿರ್ವಾಹವಿರಲಿಲ್ಲ, ಅದೆಷ್ಟೋ ಬಾರಿ ಸಣ್ಣ ಸುಳಿವುಗಳ ಜಾಡು ಹಿಡಿದು ಜಟಿಲ ಕಗ್ಗಂಟುಗಳು ಬಗೆಹರಿದ ಉದಾಹರಣೆಗಳಿತ್ತು. ಮಾಯಣ್ಣ ಜಾಹ್ನವಿಯ ಮನೆಗೆ ಬಂದು ಗಾರ್ಡ್ ಮೂಲಕ ಸಂದೇಶ ಕಳುಹಿಸಿದೊಡನೆ ಜಾಹ್ನವಿ ಬಾಲ್ಕನಿಗೆ ಬಂದು—

'ಬನ್ನಿ ಸಾರ್ ಮೇಲಕ್ಕೆ' ಎಂದು ಕರೆದಳು.

(ಸಶೇಷ)